Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in** **principal@klsvdit.edu.in**

Date: 5-08-2022

**ಪತ್ರಿಕಾ ಪ್ರಕಟಣೆ:**

## ಸಿ.ಇ.ಟಿ. ನಂತರ ಮುಂದೇನು? ಸಂವಾದ ಕಾರ್ಯಕ್ರಮ ಸಂಪೂರ್ಣ

ಕೆ.ಎಲ್.ಎಸ್. ವಿ. ಡಿ. ಐ. ಟಿ. ಹಳಿಯಾಳದಲ್ಲಿ ಸಿ.ಇ.ಟಿ. ನಂತರ ಕೋರ್ಸ್ ಹಾಗೂ ಸಿಟು ಆಯ್ಕೆ ಪ್ರಕ್ರಿಯೆಯ ಸಂಪೂರ್ಣ ಮಾಹಿತಿ ನೀಡುವ ಸಂವಾದ ಕಾರ್ಯಕ್ರಮ " ಸಿ.ಇ.ಟಿ. ನಂತರ ಮುಂದೇನು? " ಆಗಸ್ಟ್ 5ರ ಮಧ್ಯಾಹ್ನ 2.00 ರಿಂದ 4.00ರ ವರೆಗೆ ಆಯೋಜಿಸಲಾಗಿತ್ತು. ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಉತ್ತರ ಕನ್ನಡ ಜಿಲ್ಲೆಯ ನೋಡಲ್ ಅಧಿಕಾರಿಗಳಾದ ಡಾ. ಭಾಲಚಂದ್ರ ಭಟ್ ಅವರು ಶ್ರೇಯಾಂಕದ ಆಧಾರದ ಮೇಲೆ ಕೋರ್ಸ್ ಆಯ್ಕೆ, ಸೀಟು ಆಯ್ಕೆಗೆ ನೀಡಬೇಕಾದ ದಾಖಲೆಗಳ ಮಾಹಿತಿ, ದಾಖಲೆಗಳ ಪರಿಶೀಲನಾ ಪ್ರಕ್ರಿಯೆ, ಕೌನ್ಸಿಲಿಂಗ್ ಪ್ರಕ್ರಿಯೆಯಲ್ಲಿ ಸೀಟುಗಳನ್ನು ಆಯ್ಕೆ ಮಾಡುವ ಹಾಗೂ ಮುಂದಿನ ಸುತ್ತಿನ ಆಯ್ಕೆ ಪ್ರಕ್ರಿಯೆಯ ವಿಧಾನವನ್ನು ಸ್ಪಷ್ಟವಾಗಿ ವಿವರಿಸಿದರು. ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ವಿ.ಎ. ಕುಲಕರ್ಣಿ ಅವರು ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉತ್ತರಿಸುತ್ತಾ, ವೃತ್ತಿಪರ ಶಿಕ್ಷಣ ಪ್ರವೇಶಾತಿ ಪರೀಕ್ಷೆಯ ನಂತರದ ಪ್ರಕ್ರಿಯೆಯ ಸರಿಯಾದ ಮಾಹಿತಿ ಹೊಂದಿ ಉತ್ತಮವಾದ ಕೋರ್ಸುಗಳನ್ನು ಆಯ್ಕೆ ಮಾಡಿಕೊಂಡು ಉಜ್ವಲ ಭವಿಷ್ಯ ಹೊಂದುವಂತೆ ಶುಭಹಾರೈಸಿದರು. ಕಾರ್ಯಕ್ರಮದ ಸಂಚಾಲಕರಾದ ಪ್ರೊ.ಸುಧೀರ್ ಕುಲಕರ್ಣಿ ಅವರು ಈ ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳಿಗೆ ಭಾಗವಹಿಸಲು ಉತ್ತೇಜಿಸಿದ ವಿವಿಧ ಪದವಿ ಪೂರ್ವ ವಿದ್ಯಾಲಯದ ಪ್ರಾಚಾರ್ಯರಿಗೆ ಧನ್ಯವಾದ ತಿಳಿಸುತ್ತ ನೆರೆದ ಎಲ್ಲ ವಿದ್ಯಾರ್ಥಿಗಳಿಗೆ ಶುಭಹಾರೈಸಿದರು. ಈ ಸಂವಾದ ಕಾರ್ಯಕ್ರಮದಲ್ಲಿ 50ಕ್ಕೂ ಅಧಿಕ ವಿದ್ಯಾರ್ಥಿಗಳು ಹಾಗೂ ಪಾಲಕರು ಸಕ್ರಿಯವಾಗಿ ಭಾಗವಹಿಸಿ ಸಿ.ಇ.ಟಿ. ನಂತರ ಮುಂದೇನು ಎಂಬ ಪ್ರಶ್ನೆಗೆ ಉತ್ತರ ಕಂಡುಕೊಂಡರು.

ಪ್ರಾಂಶುಪಾಲರು

Principal
KLS Vishwanathrao Deshpande
Institute of Technology, Haliyal



KLS VDIT
Transforming Through Technology
"ವೃತ್ತಿಪರ ಶಿಕ್ಷಣ ಪ್ರವೇಶಾತಿ ಮಾರ್ಗದರ್ಶನ"
05 AUGUST 2022, FRIDAY
KLS
VDIT